MANUVIKASA
Success Stories

# ಪುಟ್ಟ ಕೃಷಿ ಹೊಂಡ; ನಿಶ್ಚಿತ ಹಾಗೂ ನಿರಂತರ ಆದಾಯ

***ಸಾರಾಂಶ:*** *ಎರಡು ಎಕರೆ ಜಮೀನು, ನಾಲ್ಕು ಜನರ ಪುಟ್ಟ ಕುಟುಂಬ ಮಾಲಿನಿ ಅವರದು. ಕೃಷಿ ಹೊಂಡದ ಪರಿಪೂರ್ಣ ಬಳಕೆಯಿಂದ ಇವರ ಕೃಷಿ ಚಿತ್ರಣವೇ ಬದಲಾಗಿದೆ. ಬಟಾ ಬಯಲಾಗಿದ್ದ ಕಡೆ ಇಂದು ವೈವಿಧ್ಯಮಯ ತೋಟ ತಲೆ ಎತ್ತಿದೆ. ತನ್ನ ಬದುಕು ಕಟ್ಟಿಕೊಳ್ಳುವುದರ ಜೊತೆಗೆ ನಾಲ್ಕು ಜನರಿಗೆ ಸಹಾಯ ಮಾಡುವ ಗುಣದಿಂದಾಗಿ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ 'ನಾಯಕ'ರಾಗಿಯೂ ಹೊರಹೊಮ್ಮುತ್ತಿರುವ ಹೆಣ್ಣು ಮಗಳ ಬದುಕಿನ ಚಿತ್ರಣ ಇಲ್ಲಿದೆ*

ಕುಮಾರಿ ಕೋಡ್ಲು ಗ್ರಾಮದ ಮಾಲಿನಿ ಸತೀಶ್ 10ನೇ ತರಗತಿ ಓದಿದ್ದಾರೆ. ಇಬ್ಬರು ಮಕ್ಕಳು. ಒಂದು ಗಂಡು–ಒಂದು ಹೆಣ್ಣು. ಮಗ ಬಿ.ಕಾಂ ಹಾಗೂ ಮಗಳು 9ನೇ ತರಗತಿ ಓದುತ್ತಿದ್ದಾರೆ. ಗಂಡ ಸತೀಶ್ ಅವರಿಗೆ ವ್ಯವಸಾಯ ಮುಖ್ಯ ಕಸುಬು. ಅಡಿಕೆ, ಬಾಳೆ ಹಾಗೂ ಏಲಕ್ಕಿ ಪ್ರಮುಖ ಬೆಳೆಗಳು. 7–8 ವರ್ಷಗಳ ಹಿಂದೆ ಭತ್ತ ಬೆಳೆಯುತ್ತಿದ್ದರು. ಈಗ ಬಿಟ್ಟಿದ್ದಾರೆ.



2013ರಿಂದ ಮನು ವಿಕಾಸ ಸಂಸ್ಥೆಯ 'ಅನ್ನಪೂರ್ಣೇಶ್ವರಿ ಸ್ವಸಹಾಯ ಸಂಘ'ದ ಸದಸ್ಯರಾಗಿದ್ದಾರೆ ಮಾಲಿನಿ. ಮನು ವಿಕಾಸ ಪರಿಚಯವಾಗುವ ಮುನ್ನ ಇವರ ಜಮೀನಿನಿಗೆ ನೀರಿನ ಆಶ್ರಯ ಇರಲಿಲ್ಲ. ಜಮೀನು ಇಳಿಜಾರಿನಲ್ಲಿ ಇರುವುದರಿಂದ ಜಮೀನಿನ ಮೇಲು ತುದಿಯಲ್ಲಿ ಒಂದು ಸಣ್ಣ ಹೊಂಡ ಮಾಡಿಕೊಂಡಿದರು. ಆ ನೀರಿನ ಆಶ್ರಯದಿಂದ ಮಳೆಗಾಲದಲ್ಲಿ ಮಾತ್ರ ಭತ್ತ ಬೆಳೆಯಲು ಸಾಧ್ಯವಿತ್ತು.

2014ರಲ್ಲಿ ಮನು ವಿಕಾಸದಿಂದ ಸಣ್ಣ–ಅತಿಸಣ್ಣ ರೈತರಿಗೆ ಕೃಷಿ ಹೊಂಡ ತೆಗೆಸಿಕೊಡುವ ಯೋಜನೆಯಡಿ ಮಾಲಿನಿ ಅವರನ್ನು ಫಲಾನುಭವಿಯಾಗಿ ಆಯ್ಕೆ ಮಾಡಿಕೊಂಡಿತು. ಮುಂಚೆಯೇ ಇದ್ದ ಸಣ್ಣ ಹೊಂಡದ ಬಳಿಯೇ ತಲಾ 30 ಅಡಿ ಆಳ, ಅಗಲ ಮತ್ತು ಉದ್ದದ ಕೃಷಿ ಹೊಂಡವನ್ನು ಜೆ.ಸಿ.ಬಿ ಉಪಯೋಗಿಸಿ ನಿರ್ಮಿಸಿತು. ಇದಕ್ಕೆ ರೂ. 15000 ವೆಚ್ಚ ಬಂದಿದ್ದು ಅಷ್ಟೂ ಮೊತ್ತವನ್ನು ಸಂಸ್ಥೆಯು ಭರಿಸಿತು.



ಒಂದು ವರ್ಷ ಗಮನಿಸಿದಾಗ ಈ ಹೊಂಡದಲ್ಲಿ ವರ್ಷದ ಯಾವಾಗಲೂ ನೀರು ಶೇಖರಣೆಯಾಗಿರುವುದು ಕಂಡು ಬಂದಿತು. ನೀರು ಬಳಸಿದಂತೆಲ್ಲಾ ತುಂಬಿಕೊಳ್ಳುತ್ತಿತ್ತು. ಇದನ್ನು ಗಮನಿಸಿದ ಮಾಲಿನಿ ಮತ್ತು ಸತೀಶ್ ಅಡಿಕೆ ಹಾಕಲು ತೀರ್ಮಾನಿಸಿದರು. ಪೂರಾ ಎರಡು ಎಕರೆಗೂ ಅಡಿಕೆ ಸಸಿ ನೆಡುವ ತೀರ್ಮಾನವಾಯಿತು. ಇದಕ್ಕಾಗಿ–ಅಂದರೆ ಸಸಿ ಖರೀದಿ, ಯಂತ್ರದಿಂದ ಗುಂಡಿ ತೆಗೆಸುವುದು, ಗೊಬ್ಬರ ಕೊಡುವುದು–ಇತ್ಯಾದಿ ಕೆಲಸಗಳಿಗಾಗಿ ಸುಮಾರು 2 ಲಕ್ಷ ವೆಚ್ಚವಾಯಿತು. ಮಾಲಿನಿ ಅವರು ತಮ್ಮ ಸ್ವಸಹಾಯ ಸಂಘದಿಂದ ಎರಡು ಬಾರಿ ತಲಾ 50 ಸಾವಿರದಂತೆ ರೂ. 1 ಲಕ್ಷ ಹಣವನ್ನು ಪಡೆದರು. ಅಡಿಕೆ ಇಟ್ಟ ನಂತರ ಅಂತರ ಬೆಳೆಯಾಗಿ ಬಾಳೆ ಹಾಗೂ ಏಲಕ್ಕಿಯನ್ನು ಸಂಯೋಜನೆ ಮಾಡಿದ್ದು ಇವರ ಜಾಣ್ಮೆ.

ಕಳೆದ ಎರಡು ವರ್ಷಗಳಿಂದ (2020ರಿಂದ) ಅಡಿಕೆ ಫಸಲು ಆರಂಭವಾಗಿದ್ದು, ಅಂದಾಜು 2.5 ಕ್ವಿಂಟಾಲ್ ಒಣ ಅಡಿಕೆ ಇಳುವರಿ ಲಭಿಸುತ್ತಿದೆ. ಜೊತೆಗೆ ಸುಮಾರು ಒಂದು ಕ್ವಿಂಟಾಲ್ ಬಾಳೆ ಇಳುವರಿ ಪಡೆಯುತ್ತಿದ್ದಾರೆ. ಏಲಕ್ಕಿಯೂ ಸ್ವಲ್ಪ ಪ್ರಮಾಣದಲ್ಲಿ ಲಭಿಸುತ್ತಿದೆ. ಮೂರೂ ಬೆಳೆಯಿಂದ ಪ್ರಸ್ತುತ ವಾರ್ಷಿಕ ಸರಾಸರಿ 2 ಲಕ್ಷ ರೂ. ಆದಾಯ ದೊರೆಯುತ್ತಿದೆ. ಮುಂದಿನ ವರ್ಷದಿಂದ (2023) ಎಲ್ಲಾ ಅಡಿಕೆ ಮರಗಳೂ ಪರಿಪೂರ್ಣವಾಗಿ ಫಸಲು ಕೊಡಲಾರಂಭಿಸಿದಾಗ ವರ್ಷಕ್ಕೆ 6–7 ಕ್ವಿಂಟಾಲ್ ಇಳುವರಿ ಬರಬಹುದು ಎನ್ನುತ್ತಾರೆ ಸತೀಶ್. ಆಗ ಇವರ ಆದಾಯವು ವಾರ್ಷಿಕ 4 ಲಕ್ಷ ರೂ. ನಿರೀಕ್ಷಿಸಬಹುದು. ಇದರಲ್ಲಿ 1 ಲಕ್ಷ ವೆಚ್ಚವನ್ನು ಕಳೆದರೆ 3 ಲಕ್ಷ ನಿವ್ವಳ ಆದಾಯ ದೊರೆತಂತಾಗುತ್ತದೆ. ಕೃಷಿಯ ಬಹುತೇಕ ಕೆಲಸಗಳನ್ನೂ

ಕುಟುಂಬದ ಸದಸ್ಯರೇ ನಿರ್ವಹಿಸುವುದರಿಂದ ಕೃಷಿ ವೆಚ್ಚ ಹೆಚ್ಚು ಬರುತ್ತಿಲ್ಲ. ಹೊಂಡಕ್ಕೆ ಒಂದು ಪಂಪ್ ಸೆಟ್ ಕೂರಿಸಿ ಅದರ ಮೂಲಕ ತೋಟಕ್ಕೆ ನೀರು ಹಾಯಿಸುತ್ತಾರೆ.

**ಉಪ ಆದಾಯಕ್ಕೆ ಹೊಲಿಗೆ:** ಮಾಲಿನಿ ಅವರ ತವರು ಮನೆಯಲ್ಲಿರುವಾಗಲೇ ಹೊಲಿಗೆ ಕಲಿತಿದ್ದರು. ಕೇವಲ ಮನೆ ಮಂದಿಯ ಬಟ್ಟೆಗಳನ್ನಷ್ಟೇ ಹೊಲಿಯುತ್ತಿದ್ದ ಮಾಲಿನಿ ಅವರಿಗೆ, ಅಡಿಕೆ ತೋಟ ಕಟ್ಟುವ ಮುಂಚೆ ಮತ್ತು ಅಡಿಕೆ ಸಸಿ ನೆಟ್ಟ ಆರಂಭದ 2–3 ವರ್ಷ ಕೃಷಿಯಲ್ಲಿ ಬರುವ ಆದಾಯ ಕಡಿಮೆ ಇದ್ದಾಗ ಮನೆ ನಿರ್ವಹಣೆಗೆ ಏನಾದರೂ ಆದಾಯ ಬೇಕು ಅನ್ನಿಸಿದಾಗ ನೆನಪಾಗಿದ್ದು ಹೊಲಿಗೆ. ಈಗ ಬೇರೆಯವರ ಬಟ್ಟೆಗಳನ್ನೂ ಹೊಲಿದು ದುಡಿಮೆ ಆರಂಭಿಸಿದರು. ಸ್ವಲ್ಪ ದಿವಸಕ್ಕೆ ಗ್ರಾಮದ ಹೆಣ್ಣುಮಕ್ಕಳು ತಮಗೂ ಕಲಿಸಿಕೊಡಲು ಮನವಿ ಮಾಡಿದರು. ಸಂತೋಷದಿಂದಲೇ ಒಪ್ಪಿದ ಮಾಲಿನಿ ಕಳೆದ 5–6 ವರ್ಷಗಳಿಂದ ಟೈಲರಿಂಗ್ ತರಗತಿಗಳನ್ನು ಮನೆಯಲ್ಲಿ ನಡೆಸುತ್ತಾರೆ. ಈವರೆಗೆ 15–20 ಬಡ ಹೆಣ್ಣುಮಕ್ಕಳು ಇವರಿಂದ ಕಲಿತು ಸ್ವಯಂ ಉದ್ಯೋಗ ಅಥವಾ ಮನೆ ಮಟ್ಟಿಗೆ ಹೊಲಿಗೆ ಮಾಡುತ್ತಿದ್ದಾರೆ. ಇದರಿಂದ ಮಾಸಿಕ ರೂ. 5–6 ಸಾವಿರ ಆದಾಯ ದೊರೆಯುತ್ತಿದೆ. ಬಹುತೇಕ ಮನೆ ವಾರ್ತೆಯನ್ನು ಈ ಆದಾಯದಿಂದಲೇ ತೂಗಿಸುತ್ತಿದ್ದಾರೆ.

**ನಾಯಕತ್ವ ವೃದ್ಧಿ:** ಮನುವಿಕಾಸ ಸಂಘದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು, ಸಾಲದ ಸದುಪಯೋಗ, ಸಕಾಲಕ್ಕೆ ಮರುಪಾವತಿ, ಬಡ ಹೆಣ್ಣುಮಕ್ಕಳಿಗೆ ಹೊಲಿಗೆ ಕೌಶಲ ಕಲಿಸುವುದು . . ಹೀಗೆ ತನ್ನ ಪಾಡಿಗೆ ತಾನು ದುಡಿದು ಜೀವನ ನಿರ್ವಹಣೆ ಮಾಡುತ್ತಿದ ಮಾಲಿನಿ ಅವರ ಬದುಕಿನ ರೀತಿ ಹಲವು ರೀತಿಯಲ್ಲಿ ಗ್ರಾಮದ ಇತರರನ್ನು ಪ್ರಭಾವಿಸಿತ್ತು. ಅವರೊಳಗೊಬ್ಬ ಪ್ರಾಮಾಣಿಕ ನಾಯಕ ರೂಪುಗೊಳ್ಳುತ್ತಿದ್ದ. 2014ರ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಇವರ ವಾರ್ಡ್ ಮಹಿಳಾ ಮೀಸಲು ಇದ್ದುದರಿಂದ ಎಲ್ಲರೂ ಮಾಲಿನಿ ಅವರೇ ಸೂಕ್ತ ಎಂದು ತೀರ್ಮಾನಿಸಿ ಒಪ್ಪಿಸಿದರು. ಸ್ವತಃ ಮಾಲಿನಿಯವರಿಗೇ ಅಚ್ಚರಿ. ಆದರೂ ಹಳ್ಳಿಯ ಅಭ್ಯುದಯಕ್ಕೆ ಸೇವೆ ಸಲ್ಲಿಸುವ ಅವಕಾಶ ಎಂದು ಭಾವಿಸಿ ಸ್ಪರ್ಧಿಸಿದರು. ಗೆದ್ದೂ ಬಿಟ್ಟರು.



ಮೊದಲ ಸಲ ಗೆದ್ದಿದ್ದು ಆಕಸ್ಮಿಕವೋ, ಅದೃಷ್ಟವೋ ಆಗಿರಲಿಲ್ಲ. ಏಕೆಂದರೆ 2014ರ ಅವಧಿಯಲ್ಲಿ ಗ್ರಾ.ಪಂ. ಸದಸ್ಯರಾಗಿ ಮಾಡಿದ ಕ್ರಿಯಾಶೀಲ ಕೆಲಸಗಳಿಂದ 2018ರಲ್ಲಿಯೂ ಜನರು ಇವರನ್ನೇ ಮರು ಸ್ಪರ್ಧಿಸುವಂತೆ ಕೇಳಿಕೊಂಡರು. ಹಾಗೆಯೇ ಮಾಲಿನಿಯವರು ಸ್ಪರ್ಧಿಸಿ ವಿಜಯಿಯೂ ಆದರು.

ಸಣ್ಣ ಮನೆಯಲ್ಲಿ ವಾಸವಿದ್ದ ಇವರು ಈಗ ತೋಟದ ಆದಾಯ ಆರಂಭವಾದ ಮೇಲೆ ಅದೇ ಸ್ಥಳದಲ್ಲಿ ತುಸು ದೊಡ್ಡ ಮನೆ ನಿರ್ಮಾಣ ಮಾಡುತ್ತಿದ್ದಾರೆ. 4 ವರ್ಷದ ಹಿಂದೆ ಮನೆಕಟ್ಟಲು ಆರಂಭಿಸಿದರೂ ಇನ್ನೂ ಪೂರ್ಣವಾಗಿಲ್ಲ. ಆದರೂ ಅದರಲ್ಲಿಯೇ ವಾಸ ಮಾಡುತ್ತಿದ್ದಾರೆ. ಒಂದು ಸಲ ಗ್ರಾ.ಪಂ. ಸದಸ್ಯರಾದವರೇ ದಿಢೀರ್ ಶ್ರೀಮಂತಿಕೆ ಹೊಂದುವ ಈ ಕಾಲದಲ್ಲಿ ಎರಡು ಬಾರಿ ಸದಸ್ಯರಾದರೂ ಕೃಷಿ ಆದಾಯದಿಂದಲೇ ಮನೆ ನಿರ್ಮಿಸಿಕೊಳ್ಳಲು ಪರದಾಡುತ್ತಿರುವ ಇವರ ನಡೆ ಅನುಕರಣೀಯ. ಅಲ್ಲದೆ ಈಗಲೂ ಹೊಲಿಗೆ ತರಬೇತಿ ತರಗತಿಗಳನ್ನು ನಡೆಸುತ್ತಿದ್ದಾರೆ.

ಮನು ವಿಕಾಸದಿಂದ ದೊರೆತ ಪ್ರೋತ್ಸಾಹ ಹಾಗೂ ಜನರಿಂದ ದೊರೆತ ಸಹಕಾರದಿಂದಾಗಿ ಕೃಷಿಯಲ್ಲಿಯೂ ಅಭಿವೃದ್ಧಿ ಹೊಂದುತ್ತಾ ರಾಜಕೀಯವಾಗಿಯೂ ಒಂದೊಂದೇ ಮೆಟ್ಟಿಲು ಏರುತ್ತಿದ್ದಾರೆ ಇವರು. ಕೃಷಿ ಹೊಂಡದಿಂದಲೇ ತೋಟ ಅಭಿವೃದ್ಧಿಪಡಿಸಿರುವ ಇವರಿಂದ ಪ್ರೇರಣೆಗೊಂಡು ಇವರ ಪಕ್ಕದ ಗ್ರಾಮವಾದ ಅರೇಹಳ್ಳಿಯ ಸವಿತಾ ನಾಯ್ಕ, ದೀಪಾ ನಾಯ್ಕ ಹಾಗೂ ಇನ್ನೂ ಹಲವರು ಕೃಷಿ ಹೊಂಡ ಮಾಡಿಸಿಕೊಂಡಿದ್ದಾರೆ. ‘ಮನುವಿಕಾಸದಿಂದ ನನ್ನಂತೆಯೇ ಹಲವು ಜನ ಪ್ರಯೋಜನ ಪಡೆದಿದ್ದಾರೆ” ಎನ್ನುವ ಮಾಲಿನಿ ಜೇನು ಕೃಷಿ ತರಬೇತಿ ಪಡೆಯುವ ಇಚ್ಚೆ ವ್ಯಕ್ತಪಡಿಸುತ್ತಾರೆ.

**ವಿಳಾಸ:**
**ಮಾಲಿನಿ ಸತೀಶ್**
ಕುಮಾರಿ ಕೊಡ್ಲು
ಸಿದ್ದಾಪುರ ತಾಲ್ಲೂಕು
ಉ.ಕ.ಜಿಲ್ಲೆ